# ಧರಣಿ ಮಂಡಲ ಮಧ್ಯದೊಳಗೆ...

ಕೃಷ್ಣದೇವರಾಯ ಅಧಿಕಾರಕ್ಕೇರುವ ಮುನ್ನ ವೀರನರಸಿಂಹನ ಆಳ್ವಿಕೆಯ ಕಾಲದಲ್ಲಿ ರಾಜ್ಯದ ಬೊಕ್ಕಸದಲ್ಲಿ ಅವ್ಯವಹಾರವಾಗುತ್ತಿರುವ ವಿಚಾರ ಆಂತರಿಕ ಬೇಹುಗಾರರಿಂದ ತಿಳಿದುಬಂದು, ಭಂಡಾರದ ಮುಖ್ಯಸ್ಥ ಅಲ್ಲಾಳನಾಥನನ್ನೂ, ಕೆಲವು ಮುಖ್ಯ ಕರಣಿಕರನ್ನು ಕರೆಸಿ ಗಿರಿದುರ್ಗ, ವನದುರ್ಗ, ನೆಲದುರ್ಗ, ಜಲದುರ್ಗದ ಆದಾಯದ ಸಂಪೂರ್ಣ ಲೆಕ್ಕ ಕೇಳಿದನಂತೆ. ತತ್ತರಿಸಿ ಬೆವೆತುಹೋದ ಅವರು ಕಾಲಾವಕಾಶ ಪಡೆದು ಕದ್ದದ್ದನ್ನೆಲ್ಲ ಭಂಡಾರಕ್ಕೆ ಸೇರಿಸಿದರಂತೆ. ಆದಾಗ್ಯೂ ಸ್ವಲ್ಪ ವ್ಯತ್ಯಯವಾದಾಗ ತಪ್ಪನ್ನು ಮನ್ನಿಸಿ ಶಿಕ್ಷೆ ನೀಡದಂತೆಯೂ, ಇನ್ನು ಮುಂದೆ ಇಂಥ ತಪ್ಪನ್ನು ಮಾಡುವುದಿಲ್ಲವೆಂತಲೂ ಅಡ್ಡಬಿದ್ದರಂತೆ. ಭಯಹುಟ್ಟಿಸಿ ಅವರನ್ನು ಕಳಿಸಿದ ನಂತರ ಮಂತ್ರಿ ತಿಮ್ಮರಸರ ಬಳಿ, 'ಜೀವಕ್ಕೇ ಅಪಾಯಕಾರಿಯಾದ ಜೇನಿನಹುಟ್ಟು ಇದ್ದಂತೆ ಭಂಡಾರ ಎಂಬುದು. ಜೇನುಗೂಡು ಕೀಳುವವನಿಗೆ ಅವನ ಕೈಯನ್ನು ನೆಕ್ಕಿಕೊಳ್ಳುವಷ್ಟಾದರೂ ಅವಕಾಶ ಮಾಡಿಕೊಡಬೇಕಾಗುತ್ತದೆ. ಕೈಯನ್ನು ನೆಕ್ಕಲೂ ಬಿಡದೇ ತೊಳೆದುಕೊಳ್ಳಬೇಕು ಎಂದು ಕಟ್ಟುನಿಟ್ಟು ಮಾಡಿದರೆ ಕೈಗೆ ಅಂಟಿದ ಜೇನುತುಪ್ಪವು ನೆಲಕ್ಕೆ ಸೇರಿ ವ್ಯರ್ಥವಾಗುತ್ತದೆ. ಅದರ ಬದಲು ನೆಕ್ಕಲು ಅವಕಾಶ ಕೊಟ್ಟರೆ ಮುಂದಿನ ಬಾರಿ ಆತ ಉತ್ಸಾಹದಿಂದ ಮತ್ತು ಜಾಗರೂಕತೆಯಿಂದ ಇನ್ನಷ್ಟು ಗೂಡುಗಳನ್ನು ಕೀಳಲು ಮುಂದೆ ಬರುತ್ತಾನೆ. ಆಗ ನಮ್ಮ ಸಂಗ್ರಹವೂ ಹೆಚ್ಚುತ್ತದೆ, ಅಲ್ಲವೇ?' ಎಂದು ಕೇಳಿ ದಂಗುಬಡಿಸಿದನಂತೆ.

ಮುಂದುವರೆದು, ಪ್ರಾಸಂಗಿಕವಾಗಿ ಇನ್ನೊಂದೆರಡು ರಹಸ್ಯಗಳನ್ನು ಮಂತ್ರಿಗೆ ಹೇಳಿದನಂತೆ. 'ರಾಜರ ಅಂತಃಪುರದಲ್ಲಿ ಹೆಂಗಸರನ್ನಾಗಲೀ, ಗಂಡಸರನ್ನಾಗಲೀ ಕೆಲಸಕ್ಕೆ ಇಟ್ಟುಕೊಳ್ಳಬಾರದು. ಹೆಂಗಸರನ್ನು ಇಟ್ಟುಕೊಂಡರೆ ರಾಜನನ್ನು ಮರುಳು ಮಾಡಿಬಿಡಬಹುದು. ಗಂಡಸರನ್ನು ಇಟ್ಟುಕೊಂಡರೆ ರಾಜ ಯುದ್ಧಕ್ಕೋ ಮತ್ಯಾವುದಕ್ಕೋ ತಿಂಗಳುಗಟ್ಟಲೆ ತೆರಳಿದಾಗ ರಾಣಿಯ ಮನಸ್ಸನ್ನು ಅಪಹರಿಸಿಬಿಡಬಹುದು. ಇವೆರಡೂ ಅಪಾಯಕಾರಿ. ಅದಕ್ಕೇ ಅರಮನೆಯ ಆಂತರಿಕ ಕೆಲಸಕ್ಕೆ ತೃತೀಯ ಲಿಂಗಿಗಳನ್ನು ನೇಮಿಸಿಕೊಳ್ಳುವುದು ಉಚಿತ...' ಎಂಬುದು ಒಂದು. 'ನಮ್ಮ ಗಡಿ ಪ್ರದೇಶಗಳೇನಿವೆ, ಅಲ್ಲಿನ ಜನರಿಗೆ ರಾಜ್ಯದ ಮಧ್ಯಭಾಗದವರಿಗಿಂತ ಅಧಿಕ ಸೌಲಭ್ಯ ಕೊಟ್ಟು ನೋಡಿಕೊಳ್ಳಬೇಕು. ಆಗ ಅವರಿಗೆ ನಮ್ಮ ರಾಜ್ಯದ ಬಗ್ಗೆ ಸುರಕ್ಷತೆಯ ಭಾವ ಮೂಡುತ್ತದೆ. ಆಗ ಅಕ್ಕಪಕ್ಕದ ರಾಜರಿಗೆ ಬೇಕಾದ ಸಹಾಯ ಸಹಕಾರ ನೀಡುವುದಿಲ್ಲ, ಬೇಹುಗಾರರಿಗೂ ಆಂತರಿಕ ರಹಸ್ಯ ಬಿಟ್ಟುಕೊಡುವುದಿಲ್ಲ...' ಎಂಬುದು ಇನ್ನೊಂದು. ಇವೆಲ್ಲ ಅನುಭವಸ್ಥ ಮಂತ್ರಿಗೆ ಗೊತ್ತಿಲ್ಲದ ವಿಷಯವೇನಲ್ಲ. ಆದರೆ ರಾಜ ಹೀಗೆ ಹೇಳುತ್ತಿದ್ದಂತೆ, 'ದೊರೆಗಳು ಅದರ ಹಿಂದಿನ ರಹಸ್ಯ ತಿಳಿದುಕೊಂಡುಬಿಟ್ಟಿದ್ದಾರಲ್ಲ, ಇನ್ನು ತನ್ನ ಕೆಲಸ ಹಗುರಾಯಿತು' ಎಂದುಕೊಂಡರಂತೆ. ಆಗ ಕೃಷ್ಣದೇವರಾಯರೇ ಮತ್ತೆ ಹೇಳಿದರಂತೆ, 'ಇವ್ಯಾವುವೂ ನನ್ನ ಆಲೋಚನೆಗಳಲ್ಲ. ಚಾಣಕ್ಯ ಚಂದ್ರಗುಪ್ತಮೌರ್ಯನಿಗೆ ಹೇಳಿದ ರಹಸ್ಯಗಳು...' ಎಂದಂದು ಮಂತ್ರಿ ಯಾದ ಮಂತ್ರಿಯೇ ಮತ್ತಷ್ಟು ಹುಬ್ಬೇರಿಸುವಂತೆ ಮಾಡಿದನಂತೆ.

ಆತನ ರಾಜ್ಯದಲ್ಲಿ ಕಳ್ಳತನ ವೆಂಬ ಮಾತೇ ಇಲ್ಲವಂತೆ. ಕೇವಲ ನಾಯಿ ನರಿಗಳು ನುಗ್ಗಿ ಬಿಟ್ಟಾವೆಂದು ಬಾಗಿಲು,

